## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 512(594) |
| ಉತ್ತರಿಸಬೇಕಾದ ದಿನಾಂಕ | 20.02.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರದಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿರುವ ಅಮೃತ್ ಯೋಜನೆ 1.0 ರಲ್ಲಿ ಯುಜಿಡಿ ಕಾಮಗಾರಿಗಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು; | ದಿನಾಂಕ:10.03.2016 ರಂದು ನಡೆದ 3ನೇ ಎಸ್.ಹಚ್.ಪಿ.ಎಸ್.ಸಿ ಸಭೆಯಲ್ಲಿ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಕೋಲಾರ ನಗರಕ್ಕೆ ಒಳಚರಂಡಿ ಕಾಮಗಾರಿಯ ರೂ.73.73 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.<br>ಸದರಿ ಯೋಜನೆಯ ಆರ್ಥಿಕ ಮಾದರಿಯು ಈ ಕೆಳಕಂಡಂತಿರುತ್ತದೆ.<br>**ರೂ. ಲಕ್ಷಗಳಲ್ಲಿ**<br>ಕ್ರ.ಸಂ / ವಿವರ / ಮೊತ್ತ<br>1 / ಕೇಂದ್ರ ಸರ್ಕಾರದ ಅನುದಾನ (ಶೇ.50) / 3650.00<br>2 / ಕರ್ನಾಟಕ ಸರ್ಕಾರದ ಅನುದಾನ (ಶೇ.20) / 1533.00<br>3 / ಸ್ಥಳೀಯ ಸಂಸ್ಥೆಯ ವಂತಿಕೆ (ಶೇ 30) / 2190.00<br>**ಒಟ್ಟು** / **7330.00**<br>ಈ ಯೋಜನೆಯಲ್ಲಿ ಈವರೆವಿಗೂ ಆಗಿರುವ ಒಟ್ಟು ವೆಚ್ಚ ರೂ.5566.72 ಲಕ್ಷಗಳು. |
| ಆ) | ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ಹೊಸದಾಗಿ ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸಲು 72,89,25,446 ರೂ.ಗೆ ಟೆಂಡರ್ ನ್ನು ಗುಜರಾತಿನ ಜಯಂತಿ ಸೂಪರ್ ಕನ್‌ಸ್ಟ್ರಕ್ಷನ್ ಸಂಸ್ಥೆ ಪಡೆದುಕೊಂಡಿರುವುದು ನಿಜವೇ; | ಹೌದು. |

| | | |
|---|---|---|
| ಇ) | ಟೆಂಡರ್ ಅನುಮೋದನೆ ಮಾಡುವ ಸಂದರ್ಭದಲ್ಲಿ ಇಲಾಖೆಯ ನೀತಿ-ನಿಯಮಗಳೇನು; | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (KTPP) ಅಧಿನಿಯಮ / ನಿಯಮಗಳಲ್ಲಿನ ಮಾನದಂಡಗಳನ್ವಯ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ, ಅನುಮೋದನೆ ನೀಡುವಾಗ ಅತೀ ಕಡಿಮೆ ಮೊತ್ತ ನಮೂದಿಸಿರುವ ಅರ್ಹ ಗುತ್ತಿಗೆದಾರರನ್ನು ನಿಗಧಿ ಪಡಿಸಲಾಗುವುದು. |
| ಈ | ಗುತ್ತಿಗೆ ಪಡೆದಿರುವ ಸಂಸ್ಥೆಯವರು ವೈಜ್ಞಾನಿಕವಾಗಿ ನಿರ್ಮಾಣ ಮಾಡಿಲ್ಲದ ಕಾರಣ ಕೇವಲ ಒಂದೇ ತಿಂಗಳಿನಲ್ಲಿ ನಗರದ ಕೆಲವು ವಾರ್ಡ್‌ಗಳಲ್ಲಿ ಮ್ಯಾನ್‌ಹೋಲ್‌ಗಳು ಹಾಳಾಗಿರುವುದು ನಗರಸಭೆಯ ಗಮನಕ್ಕೆ ಬಂದಿದೆಯೇ; | ಯೋಜನೆಯ ಅನುಷ್ಠಾನದ ಅವಧಿಯಲ್ಲಿ ವಿನ್ಯಾಸ ಮತ್ತು ಪರಿವೀಕ್ಷಣೆಗಾಗಿ PDMC ಯನ್ನು ನೇಮಿಸಿದ್ದು ಕಾಮಗಾರಿಗೆ ಬಳಕೆಯಾದ ವಸ್ತುಗಳು ಮತ್ತು ಕಾಮಗಾರಿಯು PDMC ರವರಿಂದ ತಪಾಸಣೆಗೆ ಒಳಪಟ್ಟಿದ್ದು ಕಾಮಗಾರಿಯು ಯಾವ ಹಂತದಲ್ಲಿಯೂ ಸಹ ಕಳಪೆಯಾಗಿರುವುದಿಲ್ಲ. ಇದಲ್ಲದೆ ಕೇಂದ್ರ ಸರ್ಕಾರದಿಂದ ನಿಯೋಜಿಸಲ್ಪಟ್ಟ IRMA ಸಂಸ್ಥೆಯು ಸಹ ಯೋಜನೆಯ ಕಾಮಗಾರಿಗಳನ್ನು ವಿವಿಧ ಹಂತಗಳಲ್ಲಿ ಪರಿವೀಕ್ಷಣೆ ನಡೆಸಿದ್ದು ಆ ಸಮಯದಲ್ಲಿ ಗಮನಿಸಿದ ನ್ಯೂನತೆಗಳನ್ನು ಮಂಡಳಿ ವತಿಯಿಂದ ನಿಯಮಾವಳಿಗಳಂತೆ ಸರಿಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿರುತ್ತದೆ.<br><br>ಯಂತ್ರಗುಂಡಿಗಳು ನಿರ್ಮಾಣವಾಗಿ ತಿಂಗಳು ಕಳೆಯುವ ಹೊತ್ತಿಗೆ ಕಳಪೆ ಕಾಮಗಾರಿಯಿಂದ ಹಾನಿಯಾಗಿರುವ ಕುರಿತು ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಕೋಲಾರ ನಗರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಮುಖ್ಯ ರಸ್ತೆಗಳ ಅಭಿವೃದ್ಧಿ ಕೈಗೊಂಡ ಸ್ಥಳಗಳಲ್ಲಿ ಒಳಚರಂಡಿ ಚೆಂಬರ್‌ಗಳನ್ನು ಅಲ್ಲಿನ ಗುತ್ತಿಗೆದಾರರು ಹಾನಿ ಮಾಡಿರುತ್ತಾರೆ. ಅಲ್ಲದೇ ಚೆಂಬರ್‌ಗಳನ್ನು ರಸ್ತೆಯ ಎತ್ತರಕ್ಕೆ ಮರು ನಿರ್ಮಾಣ ಮಾಡುವಾಗ ಒಂದೇ ಎತ್ತರಕ್ಕೆ ನಿರ್ಮಿಸದಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮಂಡಳಿಯಿಂದ ದಿನಾಂಕ:21.12.2021 ರಂದು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿರುತ್ತದೆ. |
| ಉ | ಬಂದಿದ್ದಲ್ಲಿ, ಗುತ್ತಿಗೆ ಪಡೆದ ಸಂಸ್ಥೆಯು ನಿರ್ವಹಣೆ ಕಾರ್ಯ ಮಾಡದೇ ಪೂರ್ತಿ ಹಣವನ್ನು ಪಡೆದುಕೊಂಡಿರುವುದು ನಿಜವೇ; ಹಾಗಿದ್ದಲ್ಲಿ ಇದರ ಜವಾಬ್ದಾರಿಯನ್ನು ಯಾವ ಅಧಿಕಾರಿಗಳಿಗೆ ವಹಿಸಲಾಗಿದೆ; | ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ದಿನಾಂಕ:31.12.2020 ರಿಂದ 22.02.2022 ರವರೆಗೆ ನಿರ್ವಹಿಸಿರುತ್ತಾರೆ. ಇದರ ವೆಚ್ಚ ರೂ. 55.72 ಲಕ್ಷಗಳನ್ನು ಗುತ್ತಿಗೆದಾರರಿಗೆ ನಗರಸಭೆ ವತಿಯಿಂದ ಪಾವತಿಸದ ಕಾರಣ 14 ತಿಂಗಳ ಅವಧಿಗೆ ಕಾಮಗಾರಿಗಳನ್ನು ನಿರ್ವಹಿಸಿ ತದನಂತರ ಸ್ಥಗಿತಗೊಳಿಸಿರುತ್ತಾರೆ ಮತ್ತು ಗುತ್ತಿಗೆದಾರರಿಗೆ ಈವರೆವಿಗೂ ಯಾವುದೇ ನಿರ್ವಹಣೆಯ ಮೊತ್ತ / ಹಣವನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಅಧಿಕಾರಿಗಳನ್ನು ಜವಾಬ್ದಾರಿಯನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಊ | ನಗರಸಭೆಯಿಂದ ನಕಲಿ ಬಿಲ್ ಗಳನ್ನು ಸಲ್ಲಿಸಿ ಹಣ ಡ್ರಾ ಮಾಡಿ, ನಿರ್ವಹಣೆ ಮಾಡಿರುವುದಾಗಿ ಸಂಸ್ಥೆಗೆ ಹಣ ಪಾವತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಕೋಲಾರ ನಗರಸಭೆಯಿಂದ ನಕಲಿ ಬಿಲ್‌ಗಳನ್ನು ಸಲ್ಲಿಸಿ ಹಣ ಡ್ರಾ ಮಾಡಿರುವುದಿಲ್ಲ. ಕೋಲಾರ ನಗರದ ಒಳಚರಂಡಿ ಕಾಮಗಾರಿಗೆ ಅಮೃತ್-1.0 ಯೋಜನೆಯಡಿಯಲ್ಲಿ ಸರ್ಕಾರದ ಆದೇಶದಂತೆ ನಗರಸಭೆಯ ವಂತಿಕೆ ಮೊತ್ತವನ್ನು ಮಾತ್ರ ಮಂಡಳಿಗೆ ಪಾವತಿಸಲಾಗಿರುತ್ತದೆ. ಒಳಚರಂಡಿ ಯೋಜನೆಗೆ ಸಂಬಂಧಿಸಿದಂತೆ ಇನ್ನಿತರೇ ಯಾವುದೇ ಬಿಲ್ ಮೊತ್ತವನ್ನು ಮಂಡಳಿಗೆ ಪಾವತಿಸಿರುವುದಿಲ್ಲ. |

ಸಂಖ್ಯೆ : ನಅಇ 12 ಯುಎಂಎಸ್ 2024

21/02/2024

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು